ಕರ್ನಾಟಕ ವಿಧಾನಸಭೆ

ಶುಕ್ರವಾರ 19ನೇ ಮಾರ್ಚ್ 1993

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 9-45 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: ಶ್ರೀ ವಿ.ಎಸ್. ಕೌಜಲಗಿಯವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು:

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಮಂಜೂರಾದ ಸಹಾಯಧನ ಕುರಿತು

2157: ಶ್ರೀ ಎನ್. ತಮ್ಮಣ್ಣ (ಕೆರೆಗೋಡು):– ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1991-92 ಮತ್ತು 1992-93 ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ನೋಂದಾಯಿಸಲ್ಪಟ್ಟ ಸಣ್ಣ ಕೈಗಾರಿಕೆಗಳೆಷ್ಟು;

ಆ. ನೋಂದಾಯಿಸಲ್ಪಟ್ಟ ಸಣ್ಣ ಕೈಗಾರಿಕೆಗಳಿಗೆ ಮಂಜೂರಾದ ಸಹಾಯ ಧನವೆಷ್ಟು;

ಇ. ಈ ಸಣ್ಣ ಕೈಗಾರಿಕೆಗಳಿಗೆ ಮಂಜೂರಾದ ಸಹಾಯಧನವನ್ನು ಯಾವಾಗ ಬಿಡುಗಡೆ ಮಾಡುತ್ತೀರಾ ?

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):–

. ಅ. 1991–92ನೇ ಸಾಲಿನಲ್ಲಿ 181 ಸಣ್ಣ ಕೈಗಾರಿಕೆಗಳು ಮತ್ತು 1992–93ನೇ ಸಾಲಿನ ಫೆಬ್ರವರಿ ಅಂತ್ಯದವರೆಗೆ 121 ಸಣ್ಣ ಕೈಗಾರಿಕೆಗಳು ಮಂಡ್ಯ ಜಿಲ್ಲೆಯಲ್ಲಿ ನೋಂದಾಯಿಸಲ್ಪಟ್ಟಿರುತ್ತವೆ.

ಆ. 1991–92ನೇ ಸಾಲಿನಲ್ಲಿ ರೂ.49.93 ಲಕ್ಷಗಳ ಸಹಾಯಧನ ಮತ್ತು 1992–93ನೇ ಸಾಲಿನ ಫೆಬ್ರವರಿ ಅಂತ್ಯದವರೆಗೆ ರೂ.67.58 ಲಕ್ಷ ಸಹಾಯಧನವನ್ನು ಮಂಡ್ಯ ಜಿಲ್ಲೆಯ ಸಣ್ಣ ಕೈಗಾರಿಕೆಗಳಿಗೆ ಮಂಜೂರು ಮಾಡಲಾಗಿದೆ.

ಇ. ಅದಷ್ಟು ಬೇಗನೆ ಬಿಡುಗಡೆ ಮಾಡಲಾಗುವುದು.

ಶ್ರೀ ಎನ್. ತಮ್ಮಣ್ಣ:– ಮಾನ್ಯ ಸಭಾಧ್ಯಕ್ಷರೆ, ಯಾವುದೇ ಒಂದು ಕೈಗಾರಿಕೆಯನ್ನು ಪ್ರಾರಂಭಿಸುವಾಗ ಒಂದು ಪ್ರಾಜೆಕ್ಟ್ ರಿಪೋರ್ಟ್ ಮಾಡುತ್ತಾರೆ. ಆ ಪ್ರಾಜೆಕ್ಟ್ ರಿಪೋರ್ಟ್‌ನಲ್ಲಿ ಸಬ್ಸಿಡಿ ಸೇರಿರುತ್ತದೆ. ಕೈಗಾರಿಕೆ ಪ್ರಾರಂಭವಾದ ಎರಡು ಮೂರು ವರ್ಷಗಳಾದರೂ ಹಣ ಕೊಡದಿದ್ದರೆ ಆ ಸಬ್ಸಿಡಿಗೆ ಗೌರವ ಇರುತ್ತದೆಯೇ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀಮತಿ ನಾಗಮ್ಮ.ಸಿ. ಕೇಶವಮೂರ್ತಿ:– ಮಾನ್ಯ ಅಧ್ಯಕ್ಷರೆ, ಈ ವರ್ಷ ಮಂಡ್ಯ ಜಿಲ್ಲೆಗೆ 67.58 ಲಕ್ಷ ರೂಪಾಯಿಗಳನ್ನು ನಾವು ರಿಲೀಸ್ ಮಾಡಿದ್ದೇವೆ. ಈವೊಂದು ಜಿಲ್ಲೆಗೆ ರಿಲೀಸ್ ಮಾಡಬೇಕಾಗಿರುವುದು ಇನ್ನೂ ಬಹಳ ಇದೆ. ಈ ವರ್ಷ 1993–94ರಲ್ಲಿ ಜಾಸ್ತಿ ಹಣ ಇಟ್ಟಿದ್ದೇವೆ. ಇಡೀ ಕರ್ನಾಟಕ ರಾಜ್ಯಕ್ಕೆ ಪ್ರತಿ ವರ್ಷ 15ಕೋಟಿ ರೂಪಾಯಿ ಸಹಾಯಧನವೆಂದು ನಾವು ಏನು ತೆಗೆದು ಇಡುತ್ತಿದ್ದೆವು, ಈ ವರ್ಷ ಅದನ್ನು 30ಕೋಟಿ ರೂಪಾಯಿಗೆ ಏರಿಸಿರುವುದರಿಂದ ಮುಂದಿನ

ವರ್ಷದಲ್ಲಿ ಈ ಎಲ್ಲ ಬ್ಯಾಕ್‌ಲಾಗನ್ನು ಕ್ಲಿಯರ್ ಮಾಡುವುದಕ್ಕೆ ಸಾಧ್ಯತೆ ಇದೆಯೆಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಎಸ್. ತಮ್ಮಣ್ಣ:– ಮಾನ್ಯ ಅಧ್ಯಕ್ಷರೆ, ಕೈಗಾರಿಕೆಗಳನ್ನು ಪ್ರಾರಂಭ ಮಾಡಲು ಕರ್ನಾಟಕ ಹಣಕಾಸು ಸಂಸ್ಥೆಯಿಂದ ಮುಕ್ಯಾಲು ಪಾಲು ಹಣಕಾಸು ಪಡೆದಿದ್ದಾರೆ. ಈ ಹಣಕಾಸು ಸಂಸ್ಥೆಯವರು ಮಾರ್ವಾಡಿಗಳಿಗಿಂತ ಹೆಚ್ಚಾಗಿ ಒಂದು ಕಂತು ಕಟ್ಟದಿದ್ದರೆ ಕಾರ್ಖಾನೆಗಳಿಗೆ ಬೀಗಮುದ್ರೆ ಹಾಕುತ್ತಾರೆ. ಅವರಿಗೆ ಏನಾದರೂ ಮಾನ್ಯ ಸಚಿವರು ಡೈರೆಕ್ಷನ್ ಕೊಡುವುದಕ್ಕಾಗುತ್ತದೆಯೇ ? ಸಬ್ಸಿಡಿ ರಿಲೀಸ್ ಆಗುವವರೆಗೆ ನೀವು ಬೀಗಮುದ್ರೆಯನ್ನು ಹಾಕಬೇಡಿಯೆಂದು ಏನಾದರೂ ಮಾರ್ಗದರ್ಶನ ನೀಡುತ್ತೀರಾ ಎಂದು ಕೇಳುತ್ತೇನೆ.

ಶ್ರೀಮತಿ ನಾಗಮ್ಮ.ಸಿ. ಕೇಶವಮೂರ್ತಿ:– ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ನಾನು ಈಗಾಗಲೇ ಹೇಳಿದ ಹಾಗೆ, 1993–94ರಲ್ಲಿ ನಾವೇನು ಕೊಡಬೇಕಾಗಿದೆ ಬ್ಯಾಕ್‌ಲಾಗ್ ಸಹಾಯಧನ ರೂಪದಲ್ಲಿ, ಅದನ್ನೆಲ್ಲ ನಾವು ಈ ವರ್ಷ ಮುಗಿಸುತ್ತಿದ್ದೇವೆ. ಈ ವರ್ಷ 1ಲಕ್ಷಕ್ಕಿಂತ ಕೆಳಗೆ ಇರತಕ್ಕ ಸಬ್ಸಿಡಿಯನ್ನು ಅದಷ್ಟು ಅದೇ ವರ್ಷದಲ್ಲಿ ರಿಲೀಸ್ ಮಾಡಬೇಕೆಂದು ಒಂದು ಯೋಜನೆಯನ್ನು ಈ ವರ್ಷದಲ್ಲಿ ನಾವು ಜಾರಿಗೆ ತರುತ್ತಿದ್ದೇವೆ.

ಕೆರೂರು ನಗರಕ್ಕೆ ಕುಡಿಯುವ ನೀರಿನ ಸರಬರಾಜು ಕುರಿತು

2106: ಶ್ರೀ ಎಂ.ಕೆ. ಪಟ್ಟಣಶೆಟ್ಟಿ (ಬಾದಾಮಿ):– ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1. ಕೆರೂರು ನಗರದಲ್ಲಿ ಕುಡಿಯುವ ನೀರಿನ ಪೂರೈಕೆಯ ಮೂಲಗಳು ಯಾವುದು;

2. ಕುಡಿಯುವ ನೀರಿನ ತೊಂದರೆ ಇದ್ದದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

3. ಗಮನಕ್ಕೆ ಬಂದಿದ್ದರೆ ಈ ತೊಂದರೆ ನಿವಾರಿಸಲು ಕೈಗೊಂಡ ಕ್ರಮವೇನು ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):–

1. ಕೆರೂರು ನಗರಕ್ಕೆ ಕುಡಿಯುವ ನೀರಿನ ಪೂರೈಕೆಯ ಮೂಲಗಳು 2 ತೆರೆದ ಬಾವಿಗಳು ಮತ್ತು 16 ಕೊಳವೆ ಬಾವಿಗಳು 11 ಕೊಳವೆ ಬಾವಿ ಮತ್ತು 2 ತೆರೆದ ಬಾವಿಗಳಿಗೆ ವಿದ್ಯುತ್ ಚಾಲಿತ ಪಂಪ್‌ನ್ನು ಅಳವಡಿಸಲಾಗಿದೆ. ಉಳಿದ 5 ಕೊಳವೆ ಬಾವಿಗಳಿಗೆ ಕೈಪಂಪನ್ನು ಅಳವಡಿಸಲಾಗಿದೆ.

2. ಹೌದು.

3. 1992-93ನೇ ಸಾಲಿನ ಅಭಾವ ಕಾಮಗಾರಿಕೆಗಳ ಅಡಿಯಲ್ಲಿ 9 ಕೊಳವೆ ಬಾವಿಗಳನ್ನು ತೋಡಲಾಗಿದೆ. ಅವುಗಳಲ್ಲಿ 7 ಕೊಳವೆ ಬಾವಿಗಳು ಫಲಪ್ರದವಾಗಿದ್ದು, 4 ಕೊಳವೆ ಬಾವಿಗಳಿಗೆ ಕೈ ಪಂಪನ್ನು ಮತ್ತು 3 ಕೊಳವೆ ಬಾವಿಗಳಿಗೆ ವಿದ್ಯುತ್ ಚಾಲಿತ ಪಂಪನ್ನು ಅಳವಡಿಸಲಾಗಿದೆ. ಇದು ಅಲ್ಲದೆ ಹೆಚ್ಚು ಒರೆತ ಇರುವ ಹಾಲಿ 2 ಕೊಳವೆ ಬಾವಿಗಳಿಗೆ ವಿದ್ಯುತ್ ಚಾಲಿತ ಪಂಪನ್ನು ಅಳವಡಿಸಿ ಕಿರು ನೀರು ಸರಬರಾಜು ಮುಖಾಂತರ ನೀರನ್ನು ವಿತರಿಸಲಾಗುತ್ತಿದೆ. 1992–93ನೇ ಸಾಲಿನ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಹಾಲಿ ಇರುವ ಒಂದು ಕೊಳವೆ ಬಾವಿಗೆ ಕೊಳವೆ ಮಾರ್ಗವನ್ನು ಅಳವಡಿಸಿ ಕುಡಿಯುವ ನೀರಿನ ತೊಂದರೆ ನಿವಾರಿಸಲು ಕ್ರಮ ಕೈಗೊಳ್ಳಲಾಗಿದೆ. ಇದು ಅಲ್ಲದೇ ಇನ್ನಷ್ಟು ಕೊಳವೆ ಬಾವಿಗಳನ್ನು ತೋಡಿ ಅವುಗಳಿಗೆ ವಿದ್ಯುತ್ ಚಾಲಿತ ಪಂಪನ್ನು ಅಳವಡಿಸಿ ನೀರು